ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.1816/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಹುಲಿಗೆಮ್ಮ** | | |
| **ಗಂಡನ ಹೆಸರು** | **ಅಲಮಪ್ಪ** | **ಪಿಡಬ್ಲೂ:** | **1** |
| **ವಯಸ್ಸು** | **57 ವರ್ಷ** | **ಸಿಡಬ್ಲೂ:** | **1** |
| **ಉದ್ಯೋಗ:** | **ವ್ಯವಸಾಯ** | | |
| **ವಾಸ ಸ್ಥಳ:** | **ಸಾಲಗುಂದಾ** | | |

**ದಿನಾಂಕ 01-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ::**

ಈ ದಿನ ನ್ಯಾಯಾಲಯದಲ್ಲಿ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-2 & 3 ರವರ ಪರಿಚಯ. ಚಾಸಾ-4 ನನ್ನ ಗಂಡ, ಚಾಸಾ-5 & 6 ನನ್ನ ಮಕ್ಕಳು. ಚಾಸಾ-7 ನನ್ನ ಅಕ್ಕನ ಮಗ. ಚಾಸಾ-8 ನನ್ನ ತಂಗಿ, ಚಾಸಾ-9 ನನ್ನ ತಂಗಿಯ ಮಗ. ಆರೋಪಿತರ ಪರಿಚಯ ಇದೆ.

ಈಗ 3 ವರ್ಷಗಳ ಹಿಂದೆ 5 ಗಂಟೆಯ ಸುಮಾರಿಗೆ ನನಗೆ & ನನ್ನ ಗಂಡನಿಗೆ ಹೊಡೆದಿರುತ್ತಾರೆ. ಜಗಳವಾದಾಗ ನಾನು ಮನೆಯಲ್ಲಿದ್ದೆ, ಆರೋಪಿತರೆಲ್ಲರೂ ನಮ್ಮನ್ನು ಎಳೆದು, ಬಡೆದಿರುತ್ತಾರೆ. ಹೊಲದ ಸಲುವಾಗಿ ಜಗಳ ಮಾಡಿ ನಮ್ಮನ್ನು ಹೊಡೆದಿದ್ದಾರೆ. ನಂತರ ನಾವು ಕೋರ್ಟಿಗೆ ಬಂದಿರುತ್ತೇವೆ. ಸಾಕ್ಷಿಗೆ ದೂರನ್ನು & ಪಂಚನಾಮೆಯನ್ನು ತೋರಿಸಲಾಗಿ, ಸಾಕ್ಷಿಯು

ಅವುಗಳಲ್ಲಿನ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಪಂಚನಾಮೆಯನ್ನು ನಿಪಿ-2 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

2003 ರಲ್ಲಿ ನಾವು ನಮ್ಮ ಊರಿನ ಮಾರಪ್ಪ ಇವರಿಂದ ಸರ್ವೆ ನಂ.193/1 ರಲ್ಲಿ 2 ಎಕರೆ 30 ಗುಂಟೆ ಜಮೀನು ಖರೀದಿ ಮಾಡಿದ್ದೆವು ಎಂದರೆ ಸರಿ. ಸದರಿ ಜಮೀನು ನನ್ನ ಹೆಸರಿನಲ್ಲಿದೆ, ಅದನ್ನು 2003 ರಿಂದ ಇಲ್ಲಿಯವರೆಗೂ ನಾವೇ ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿ. ಸದರಿ ವಿಷಯವಾಗಿ ಮಾರೆಪ್ಪರವರ ಮಗ, ಸೊಸೆ ರವರು ನಿಮ್ಮ ಹೊಲಕ್ಕೆ ಬಂದು, ಹೊಲ ನಮ್ಮದು ಎಂದು ಕಿರಿಕಿರಿ ಮಾಡುತ್ತಿದ್ದಾರೆ ಎಂದರೆ ಸರಿ. ಈ ಹೊಲವನ್ನು ನಮಗೆ ಬಿಟ್ಟು ಹೋಗಿರಿ ಎಂದು ವಾದ ಮಾಡಿದ್ದರು, ನೀವು ಸದರಿ ಹೊಲವನ್ನು ನಾವು ಖರೀದಿ ಮಾಡಿದ್ದೇವೆ, ಇಷ್ಟು ವರ್ಷ ಬಿಟ್ಟು ಈಗ ಏಕೆ ಹೀಗೆ ಮಾಡುತ್ತಿದ್ದೀರಿ ಎಂದು ನೀವು ಅವರನ್ನು ಕೇಳಿದ್ದಿರಿ ಎಂದರೆ ಸರಿ.

ಕೇಸು ಹಾಕುವ 1 ವಾರದ ಮುಂಚೆ ಆ ಹೊಲದಲ್ಲಿ ನೀವು ಭತ್ತ ನಾಟಿ ಮಾಡಿದ್ದಿರಿ ಎಂದರೆ ಸರಿ. ದಿ.12-08-2021 ರಂದು ಸಂ.5-30 ಕ್ಕೆ ನೀವು, ನಿಮ್ಮ ಗಂಡ, ಮಕ್ಕಳು, ನಿಮ್ಮ ಗಂಡನ ತಂಗಿ ರವರು ಮನೆಯಲ್ಲಿದ್ದಾಗ ಆರೋಪಿತರು ಗುಂಪುಕಟ್ಟಿಕೊಂಡು, ಕೈಯಲ್ಲಿ ಕಟ್ಟಿಗೆ ಹಿಡಿದುಕೊಂಡು ಬಂದಿದ್ದರು ಎಂದರೆ ಸರಿ. ಏಕಾಏಕಿ ನಿಮ್ಮ ಮನೆಯ ಒಳಗೆ ನುಗ್ಗಿ, ನಿಮ್ಮನ್ನು ಹಿಡಿದು ಎಳೆದುಕೊಂಡು ಬಂದು, ಕೈಗಳಿಂದ, ಕಟ್ಟಿಗೆಯಿಂದ ಹೊಡೆದು, ಹೊಲ ನಮ್ಮದು, ನಮಗೆ ಭತ್ತ ನಾಟಿ ಮಾಡಲು ಬಿಡಿ ಎಂದು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. ನಂತರ ಅವರೆಲ್ಲರೂ ನೀವೇನು ಮಾರೆಪ್ಪನಿಗೆ ಹುಟ್ಟೀರೇನು ಎಂದು ಅವಾಚ್ಯವಾಗಿ ಬೈದರು ಎಂದರೆ ಸರಿ. 2 ನೇ ಆರೋಪಿ ನಿಮ್ಮ ಮೈಕೈಮುಟ್ಟಿ, ಕೈ ಹಿಡಿದು ಎಳೆದಾಡಿ ಅವಮಾನ ಮಾಡಿ, ಕೈಯಿಂದ ಬೆನ್ನಿಗೆ ಗುದ್ದಿದನು ಎಂದರೆ ಸರಿ. 3 ನೇ ಆರೋಪಿ ನಿಮ್ಮ ಗಂಡನಿಗೆ ಕೈಯಿಂದ ಬೆನ್ನಿಗೆ, ಎಡಗೈ ಭುಜದ ಹತ್ತಿರ ಗುದ್ದಿದ ಎಂದರೆ ಸರಿ. 1 ನೇ ಆರೋಪಿ ನಿಮ್ಮ ಮಗ ರಮೇಶನಿಗೆ ಕಪಾಳಕ್ಕೆ ಹೊಡೆದರು ಎಂದರೆ ಸರಿ. 5 ನೇ ಆರೋಪಿ ಧರ್ಮಣ್ಣನಿಗೆ ಕೈ ಮುಷ್ಟಿ ಮಾಡಿ ಬಾಯಿಗೆ ಗುದ್ದಿ, ಕಟ್ಟಿಗೆಯಿಂದ ಎಡಗೈಮುಂಗೈಗೆ ಹೊಡೆದು, ಅಂಗಿ ಹಿಡಿದು ಎಳೆದಾಡಿದ್ದು, ಅದರಿಂದ ಅಂಗಿ ಹರಿದಿತ್ತು ಎಂದರೆ ಸರಿ.

ಚಾಸಾ-7 ರವರಿಗೆ 4 ನೇ ಆರೋಪಿ ಕೈಯಿಂದ ಬೆನ್ನಿಗೆ 2-3 ಸಲ ಗುದ್ದಿ, ಅಂಗಿ ಹರಿದಿದ್ದ ಎಂದರೆ ಸರಿ. ಚಾಸಾ-8 & 9 ರವರು ಜಗಳ ಬಿಡಿಸಿದ್ದರು ಎಂದರೆ ಸರಿ. ಆಗ ಆರೋಪಿತರು ನಿಮಗೆ

ಅವಾಚ್ಯ ಶಬ್ದಗಳಿಂದ ಬೈದು, ಇವತ್ತು ಬಿಟ್ಟೀವಿ, ಇನ್ನೊಮ್ಮೆ ನಿಮ್ಮನ್ನು ಜೀವಂತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದರು ಎಂದರೆ ಸರಿ. ಸದರಿ ಜಗಳದಿಂದ ನಿಮ್ಮ ಪಾದದ ಮೇಲೆ ತೆರೆಚಿದ ಗಾಯ, ನನ್ನ ಮಗ ಚಾಸಾ-6 ರವರಿಗೆ ಕುತ್ತಿಗೆಗೆ ಗಾಯ, ಎಡಗೈಮುಂಗೈಗೆ ಗಾಯ, ಚಾಸಾ-4 ರವರಿಗೆ ಬೆನ್ನಿಗೆ ಮೂಕಪೆಟ್ಟಾಗಿತ್ತು ಎಂದರೆ ಸರಿ.

ನನ್ನ ಗಂಡ & ಚಾಸಾ-5 ರವರು ಅಂಗವಿಕಲರಿದ್ದಾರೆ ಎಂದರೆ ಸರಿ. ಆರೋಪಿತರು ಹೊಡೆ ಬಡೆ ಮಾಡಿದ್ದರು ಎಂದು ದಿ.12-08-2021 ರಂದು ಠಾಣೆಗೆ ಹೋಗಿ ದೂರು ಕೊಟ್ಟಿದ್ದೀರಿ ಎಂದರೆ ಸರಿ. ದಿ.13-08-2021 ರಂದು ಬೆ. 10 ರಿಂದ 11 ಗಂಟೆಯ ಸುಮಾರಿಗೆ ನಾನು ತೋರಿಸಿದ ಸ್ಥಳದಲ್ಲಿ ನಿಪಿ-2 ರಂತೆ ಪಂಚನಾಮೆ ಮಾಡಿ, ಮು. ಮಾ. 1 ನ್ನು ಪಂಚರ ಸಮಕ್ಷಮ ಜಪ್ತು ಪಡಿಸಿಕೊಂಡಿದ್ದರು ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.**